8

# ಪ್ರಶ್ನೆ:

# “ಸಭೆಯು ಪ್ರಾರಂಭವಾದಾಗ ಅದು ಹೇಗೆ ಇತ್ತು?”

## ಉತ್ತರ:

ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ, ನಮಗೆ ಒಂದು ಮಟ್ಟವೂ ಒಂದು ಮಾದರಿಯೂ ಅಗತ್ಯವಾಗಿರುತ್ತದೆ. ಸಮಯವನ್ನು ಹೇಳುವ ವಿಷಯದಲ್ಲಿ ಉದಾಹರಣೆಯಾಗಿ, ಒಬ್ಬನು ತನ್ನ ವಾಚಿನ ಚರಿತ್ರೆಯ ಮೇಲೆ ಅವಲಂಭಿಸುವದಿಲ್ಲ. “ಈ ವಾಚು ನನ್ನ ಸ್ಕೊಟಿಸ್ ಅಜ್ಜನದಾಗಿತ್ತು” ಎಂದು ಹೇಳುವುದು, ಅದು ಉತ್ತಮ ಸಮಯ ಕೊಡುವ ಭರವಸೆಯಾಗಿರುವದಿಲ್ಲ. ಹಾಗೆಯೇ “ನನ್ನ ಸ್ಕೊಟೀಸ್ ಅಜ್ಜನು ಈ ಸಭೆಯ ಸದಸ್ಯನಾಗಿದ್ದನು” ಎಂದು ಹೇಳುವುದು, ಅದು ಹೊಸ ಒಡಂಬಡಿಕೆಯ ಸಭೆಯಾಗಿರುವುದು ಎಂದರ್ಥವಾಗುವುದಿಲ್ಲ. ಸಮಯವನ್ನು ಕೊಡುವ ವಿಷಯದಲ್ಲಿ ಒಂದೇ ಒಂದು ಅವಲಂಭನೆಗೆ ಯೋಗ್ಯವಾದ ಮಟ್ಟವು - ದೇವರ ಸೂರ್ಯ. ಯು. ಎಸ್. ದಲ್ಲಿ ದಿನದ ಸಮಯದ ಸಂಕೇತಗಳು ಸೂರ್ಯನಿಂದ ಪರೀಕ್ಷಿಸಲ್ಪಡುವಂಥವುಗಳು ವರ್ಜಿನಿಯಾದ ಆರ್ಲಿಂಗ್‌ಟನ್‌ದಲ್ಲಿ, ನೇವಲ್ ಆಬ್ಜರ್ವೇಟರಿಯಿಂದ ಪ್ರಕಾಶಿಸಲ್ಪಡುವವು; ಎಲ್ಲಾ ಗಡಿಯಾರಗಳು ಆ ಸಂಕೇತಗಳಿಗನುಗುಣವಾಗಿ ಏಕಕಾಲಕ್ಕಿಡಲ್ಪಡಬಹುದು.

ಪ್ರತಿಯೊಬ್ಬ ವ್ಯಾಪಾರಿಯು ಅಕ್ಕಿಯ ಒಂದು ಕಿಲೋ ಪ್ಯಾಕೇಟಿನಲ್ಲಿ ಒಂದು ಸಾವಿರ ಗ್ರ್ಯಾಮ್‌ಗಳು ಇಲ್ಲವೇ ಒಂದು ಯಾರ್ಡ್ ಬಟ್ಟೆಯಲ್ಲಿ ಮೂವತ್ತಾರು ಇಂಚುಗಳು ಇರುವದನ್ನು ತಿಳಿಯಲು ಬಯಸುತ್ತಾನೆ. ಹೀಗೆ ಅಳತೆಗಳನ್ನೂ ತೂಕಗಳನ್ನೂ ಹೋಲಿಸಲು ಮಟ್ಟಗಳು ಇರುತ್ತವೆ. ವಾಶಿಂಗ್ಟನ್ ಡಿ. ಸಿ. ಯಲ್ಲಿ ಕೆಲವು ಅಳತೆಗಳ ಮತ್ತು ತೂಕಗಳ ಮಾದರಿಗಳು ಇರುತ್ತವೆ. ಈ ಮಾದರಿಗಳು ಫ್ರೆಂಚ್ ಸರಕಾರವು ಯುನೈಟೆಡ್ ಸ್ಟೇಟ್ಸ್‌ಗೆ ಕೊಟ್ಟ ಕಾಣಿಕೆಗಳು. ಇವು 90 ಶತ ಪ್ಲಾಟಿನಮ್ ಮತ್ತು 10 ಶತ ಇರಿಡಿಯಮ್‌ದಿಂದ ಮಾಡಲ್ಪಟ್ಟಿವೆ. ಯಾಕಂದರೆ ಈ ಲೋಹಗಳು ಆಕುಂಚನಗೊಳ್ಳುವುದಿಲ್ಲ ಇಲ್ಲವೇ ವಿಸ್ತಾರಗೊಳ್ಳುವುದಿಲ್ಲ. ಈ ಮಾದರಿಗಳಿಂದ ಭಿನ್ನವಾಗಿರುವ ಯಾವುದೇ ಅಳೆಯುವ ಸಾಧನವು ಸರಿಯಾದದ್ದಾಗಿರುವದಿಲ್ಲ.

ಹಾಗೆಯೇ, ಧರ್ಮಕ್ಕೂ ಸಹ ಸಮಾನವಾದ, ಬದಲಾಗದ ಆದರ್ಶಮಾದರಿಗಳು ಇರತಕ್ಕದ್ದು. ಮಾದರಿ ಸಭೆಯ ಅತೀ ಮಹತ್ವವನ್ನು ದೇವರು ಗುರುತಿಸಿದನು ಮತ್ತು ಎಲ್ಲಾ ಸಭೆಗಳು ಮಾದರಿಯನ್ನು ಅನುಸರಿಸಿ ತಮ್ಮನ್ನು ಅಳೆದುಕೊಳ್ಳುವಂತೆ ಆ ಸಭೆಯನ್ನು ಆತನು ಇಂದೂ ಸಹ ದೃಶ್ಯವಾದದ್ದನ್ನಾಗಿ ಇಟ್ಟಿದ್ದಾನೆ. ದೇವರ ಸಭೆಯ ಆ ಆದರ್ಶ ಮಾದರಿಯು ಯಾವುದೇ ಪಟ್ಟಣದಲ್ಲಿ ಬಂಧಿಸಿಡಲ್ಪಟ್ಟಿರುವದಿಲ್ಲ.

ದೇವರ ಮಾದರಿಯು ಅಳಿವಿಲ್ಲದ ಬೈಬಲಿನಲ್ಲಿ ಇರುತ್ತದೆ. ಭೂಮಿ ಆಕಾಶಗಳು ಗತಿಸಿಹೋದರೂ ಆ ಮಾದರಿಯ ಚಿತ್ರವು ಉಳಿದುಕೊಂಡಿರುವುದು. ಮಾನವರ ಸಾಂಪ್ರದಾಯಗಳು ಬರಬಹುದು, ಹೋಗಬಹುದು, ಆದರೆ ದೇವರ ಸಭೆಯು ಒಂದೇಯಾಗಿ ಉಳಿದಿರುವುದು. ಪ್ಲಾಟಿನಮ್ ಮತ್ತು ಇರಿಡಿಯಮ್ ಮಾದರಿಯು, ಎಷ್ಟೋ ಜಾಗರೂಕತೆಯಿಂದ ಮಾಡಲ್ಪಟ್ಟಿದ್ದರೂ, ಅಲ್ಪವಾಗಿ ವ್ಯತ್ಯಾಸಗೊಳ್ಳಬಹುದು; ಆದರೆ ಬೈಬಲು ಬೇಸಿಗೆಯಿಂದಲೂ ಛಳಿಯಿಂದಲೂ, ಯುಗಗಳು ದಾಟಿಹೋಗುವದರಿಂದಲೂ ರಾಷ್ಟ್ರಗಳು ಬಿದ್ದುಹೋಗುವದರಿಂದಲೂ ಹಾನಿಗೊಳಗಾಗುವದಿಲ್ಲ. ಮನುಷ್ಯನ ಮಟ್ಟವು ಪರಿಪೂರ್ಣವಾದದ್ದಲ್ಲವೆಂದು ಒಪ್ಪಿಕೊಳ್ಳಲ್ಪಟ್ಟಿವೆ, ಆದರೆ ದೇವರು ತನ್ನ ಮಾದರಿಯು "ಬಿಡುಗಡೆಯನ್ನುಂಟು ಮಾಡುವ ಸರ್ವೋತ್ತಮ ಧರ್ಮಪ್ರಮಾಣ" ಎಂದು ಹೇಳಿದ್ದಾನೆ (ಯಾಕೋಬ 1:25).

ಇತರ ಎಲ್ಲಾ ಜನರು ತಮ್ಮನ್ನು ಹೋಲಿಸಿಕೊಳ್ಳುವದಕ್ಕೆ ಒಬ್ಬನು ಮಾದರಿ ಮನುಷ್ಯನನ್ನು ಕೊಂಡುಕೊಳ್ಳಲು ಬಯಸಿದರೆ, ಗಂಭೀರ ಸಂಶೋಧನೆಯು, "ಆತನನ್ನು ಕೊಂಡುಕೊಳ್ಳಲು ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರ ನಾಲ್ಕು ಸುವಾರ್ತೆಗಳಿಗೆ ಹೋಗಿರಿ" ಎಂದು ಉತ್ತರ ಕೊಡುತ್ತದೆ. ಮಾದರಿ ಸಭೆಯನ್ನು ಕಂಡುಕೊಳ್ಳಲು ಒಬ್ಬನು ಬಯಸಿದರೆ, ತನ್ನ ಪ್ರಾರಂಭದಿಂದಲೇ ಅಸ್ತಿತ್ವದಲ್ಲಿದ್ದ, ಮನುಷ್ಯ ಕೃತ್ಯಗಳು ಹಾಳುಮಾಡಿ ಕೆಡಿಸದ ಸಭೆಯ ಕಡೆಗೆ ನೋಡತಕ್ಕದ್ದು. ತನ್ನ ಪ್ರಾರಂಭದಿಂದಲೇ ಅಸ್ತಿತ್ವದಲ್ಲಿದ್ದಂತೆ ಸಭೆಯ ಕಥೆಯು ಹೊಸ ಒಡಂಬಡಿಕೆಯಲ್ಲಿ, ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಪ್ರಾರಂಭಿಸಿದ್ದರಲ್ಲಿ ಕಂಡುಬರುತ್ತದೆ.

## ಸಭೆಯೊಳಗೆ ಪ್ರವೇಶಕ್ಕಾಗಿ ದೇವರ ಮಾದರಿ

ದೇವರ ಸಭೆಯೊಳಗೆ ಪ್ರವೇಶದ ನಿಯಮವು ಯಾವುದು? ಯೇಸು ಕ್ರಿಸ್ತನು ಮೋಡಗಳೊಳಗಿಂದ ತನ್ನ ತಂದೆಯ ಬಳಿಗೆ ಹೋಗುತ್ತಿದ್ದಾಗ, ಆತನಿಂದ ನಿರ್ದೇಶಿಸಲ್ಪಟ್ಟ ಅಪೊಸ್ತಲರು ಪರಿಶುದ್ಧಾತ್ಮನ ಬಾಪ್ತಿಸ್ಮಕ್ಕಾಗಿ ಯೆರೂಸಲೇಮಿನಲ್ಲಿ ಕಾದುಕೊಂಡಿರಲು ಹೋದರು. ದೇವರ ಆತ್ಮನು ಬಂದಾಗ ಅವರೆಲ್ಲರೂ ಒಂದೇ ಮನಸ್ಸಿನಿಂದ ಒಂದು ಸ್ಥಳದಲ್ಲಿ ಇದ್ದರು. ಏನು ಹೇಳಬೇಕು, ಏನು ಪ್ರಸಂಗಿಸಬೇಕು ಎಂಬುದರ ಬಗ್ಗೆ ಅವರು ಚಿಂತಿಸಬೇಕಾಗಿರಲಿಲ್ಲ, ಯಾಕೆಂದರೆ ದೇವರ ಆತ್ಮನು ಅವರ ಬಾಯಿಗಳಲ್ಲಿ ಮಾತುಗಳನ್ನು ಇಡಲಿಕ್ಕಿದ್ದನು. ಅವರು ಇಂದಿನ ಎಲ್ಲಾ ಪ್ರಸಂಗಿಗಳಿಗಿಂತ ಭಿನ್ನವಾಗಿದ್ದರೂ - ತಮ್ಮ ಮಾತುಗಳಲ್ಲಿ, ತಮ್ಮ ಬೋಧನೆಯಲ್ಲಿ ಯಾವ ತಪ್ಪನ್ನೂ ಅವರು ಮಾಡದವರಾಗಿದ್ದರು, ಯಾಕಂದರೆ ದೇವರ ಆತ್ಮನು ತಪ್ಪುಗಳನ್ನು ಮಾಡಲಾರನು. ಹೀಗೆ ಎರಡು ಸಾವಿರ ವರ್ಷಗಳ ಹಿಂದಿನ ಈ ಮಾದರಿಯನ್ನು ಅಧ್ಯಯನ ಮಾಡುವದರ ಮಹತ್ವವನ್ನು ನೋಡುತ್ತೇವೆ; ಪರಿಶುದ್ಧಾತ್ಮನಿಂದ ಪ್ರತಿಯೊಂದು ಮಾತಿನಲ್ಲಿ ಪ್ರಸಂಗಿಗಳು ನಡಿಸಲ್ಪಟ್ಟಾಗ ನಿಶ್ಚಯವಾಗಿಯು ಪ್ರಸಂಗಿಸಲ್ಪಡಬೇಕೆಂದು ದೇವರು ಬಯಸಿದ್ದು ಘೋಷಿಸಲ್ಪಟ್ಟಿತು. ಸಭೆಯೊಳಗೆ ಪ್ರವೇಶಕ್ಕಾಗಿ ಅಗತ್ಯತೆಗಳ ಬಗ್ಗೆ ಆ ಪ್ರೇರೇಪಿತ - ಪ್ರಸಂಗಿಗಳು ಏನನ್ನು ಹೇಳಿದರು?

### ಯೇಸು ಕ್ರಿಸ್ತನನ್ನು ಪ್ರಸಂಗಿಸಿದ್ದು

ಮೊದಲನೆಯದು, ಈ ಪ್ರೇರಿತ - ಜನರು *ಪ್ರಸಂಗಿಸಿದರು* ಎಂಬುದನ್ನು ಗಮನಿಸಿರಿ. ಅವರು ಶಿಶುಗಳಿಗೆ ಮಾತಾಡಲಿಲ್ಲ, ಇಲ್ಲವೇ ಇಂದು ತಮ್ಮಷ್ಟಕ್ಕೆ ತಾವೇ

ವಿವೇಚಿಸಿ ಕಾರ್ಯಮಾಡಲಾರದವರಿಗೆ ತಮ್ಮ ಮಾತುಗಳನ್ನು ಹೇಳಲಿಲ್ಲ. ಅವರು ತಮ್ಮ ಬಾಯಿಗಳಿಂದ ಜವಾಬ್ದಾರಿಕೆಯುಳ್ಳ ಜನರ ಮೇಲೆ ಪ್ರಭಾವ ಬೀರಲು ಬಯಸಿದರು. ಅವರನ್ನು ರಕ್ಷಿಸಲಿಕ್ಕೆ ಯಾವುದೇ ಪರಿಶುದ್ಧಾತ್ಮನ ಸುರುಸುವಿಕೆಯನ್ನು ಜನರು ನಿರೀಕ್ಷಿಸುತ್ತಿರಲಿಲ್ಲ. ಅದು ಹಾಗಿದ್ದರೆ, ಪ್ರಸಂಗಿಸುವಿಕೆಯು ಅನಾವಶ್ಯಕವಾಗುತ್ತಿತ್ತು; ಮತ್ತು ದೇವರು ಅನಾವಶ್ಯಕವಾದ ವಿಷಯಗಳಲ್ಲಿ ತನ್ನ ಸಮಯವನ್ನು ಹಾಳುಮಾಡುತ್ತಿರಲಿಲ್ಲ. ಪ್ರಸಂಗಿಸುವಿಕೆಯು ಅಗತ್ಯವಾದದ್ದಾಗಿತ್ತು ಹಾಗೂ ಅಗತ್ಯವಾದದ್ದಾಗಿರುವುದು. ಜನರನ್ನು ರಕ್ಷಿಸುವದಕ್ಕಾಗಿ ದೇವರ ಯೋಜನೆಯು ಸುವಾರ್ತಾ ಸಂದೇಶದ ಪ್ರಸಂಗಿಸುವಿಕೆಯ ಮೇಲೆ ಅವಲಂಭಿಸಿರುತ್ತದೆ (1 ಕೊರಿಂಥ 1:21; ರೋಮಾಪುರ 10:13, 14). ಜನರು ವಾಕ್ಯದ ಪ್ರಸಂಗಿಸುವಿಕೆಯಿಲ್ಲದೇ ರಕ್ಷಿಸಲ್ಪಡದವರಾಗಿದ್ದುದರಿಂದ, ಅದೇ ಕಾರ್ಯಕ್ಕಾಗಿ ಕ್ರಿಸ್ತನು ತನ್ನ ಅಪೊಸ್ತಲರನ್ನು ಜಾಗರೂಕತೆಯಿಂದ ತರಬೇತುಗೊಳಿಸಿದನು.

ಅವರು ಏನನ್ನು ಪ್ರಸಂಗಿಸಿದರು? ಪಂಚಾಶತ್ತಮದ ದಿನದಂದು ಪೇತ್ರನ ಮೊದಲನೆಯ ಸುವಾರ್ತಾ ಪ್ರಸಂಗವನ್ನು ಅಪೊಸ್ತಲರ ಕೃತ್ಯಗಳು 2ರಲ್ಲಿ ಓದುತ್ತೇವೆ:

> "ಇಸ್ರಾಯೇಲ್ ಜನರೇ, ನನ್ನ ಮಾತುಗಳನ್ನು ಲಾಲಿಸಿರಿ - ನಜರೇತಿನ ಯೇಸು ಇದ್ದನಲ್ಲಾ, ದೇವರು ನಿಮಗೂ ತಿಳಿದಿರುವಂತೆ ಆತನ ಕೈಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕಕಾರ್ಯಗಳನ್ನೂ ನಿಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿಕೊಟ್ಟನು. ಆ ಯೇಸು ದೇವರ ಸ್ಥಿರಸಂಕಲ್ಪಕ್ಕೂ ಭವಿಷದ್ ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ. ಆತನನ್ನು ದೇವರು ಮರಣವೇದನೆಗಳಿಂದ ಬಿಡಿಸಿ ಎಬ್ಬಿಸಿದನು; ಯಾಕಂದರೆ ಮರಣವು ಆತನನ್ನು ಹಿಡಿದುಕೊಂಡಿರುವದು ಅಸಾಧ್ಯವಾಗಿತ್ತು."
>
> "... ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನು ಅನುಭವಿಸುವದಿಲ್ಲ ... ಆದುದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ" (ವಚನಗಳು 22-36).

ಪರಿಶುದ್ಧಾತ್ಮನ ಪ್ರೇರಿತ ಪ್ರಸಂಗಿಯು ಆ ಧೈರ್ಯದ, ಮಹಿಮೆಯುಳ್ಳ ಘಟನೆಗಳು ಸಾರಲ್ಪಟ್ಟಾಗ, ಕೇಳುತ್ತಿದ್ದ ಜನಸಮೂಹದ ಸದಸ್ಯರು, "ಹೃದಯದಲ್ಲಿ ಅಲಗುನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ - ಸಹೋದರರೇ, 'ನಾವೇನು ಮಾಡಬೇಕು' " ಎಂದು ಕೇಳಿದರು (ವಚನ 37). ಆ ಗಂಭೀರವಾದ ಮತ್ತು ಆತ್ಮ - ಶೋಧಿಸುವ ಪ್ರಶ್ನೆಗೆ ಪ್ರಸಂಗಿಗಳು ಏನು ಹೇಳಿದರು?

**ಸುವಾರ್ತೆಗೆ ವಿಧೇಯತೆ**

ದೇವರ ಪ್ರಸಂಗಿಗಳು ಸತ್ತವರೊಳಗಿಂದ ಪುನರುತ್ಥಾನಗೊಂಡ ಯೇಸುವಿನ ಶುಭವಾರ್ತೆಯನ್ನು ಹೇಳಿದರು ಅಷ್ಟೇ ಅಲ್ಲ, ಜನರಿಗೆ ಅವರು ಏನು ಮಾಡಬೇಕೆಂದೂ ಹೇಳಿದರು. ಯೇಸುವು ಪ್ರತಿಯೊಬ್ಬರಿಗಾಗಿ ಮರಣ ಹೊಂದಿದನೆಂದು ಆ ಪ್ರಸಂಗಿಗಳು ನಂಬಿದರು, ಆದರೆ ಅಷ್ಟು ಮಾತ್ರವೇ ಸಾಕು ಎಂದು ಅವರು ಯೋಚಿಸಲಿಲ್ಲ; ಪುರುಷರು, ಸ್ತ್ರೀಯರು ಆತನ ಯಜ್ಞದ ಬಗ್ಗೆ ತಿಳಿದುಕೊಳ್ಳಬೇಕೆಂದು ಅವರು ಯೋಚಿ

ಸಿದರು. ಆದುದರಿಂದ ಅವರು ಶಿಲುಬೆಯ ಕಥೆಯನ್ನು ಪ್ರಸಂಗಿಸಿದರು. ಅವನು ಏನು ಮಾಡಿದರೂ, ಇಲ್ಲವೇ ಹೇಗೆ ಜೀವಿಸಿದರೂ ಪ್ರತಿಯೊಬ್ಬನೂ ರಕ್ಷಿಸಲ್ಪಡುವವನು ಎಂದು ಅಪೊಸ್ತಲರು ನಂಬಲಿಲ್ಲ. ಅವರು ಪಾಪದಲ್ಲಿರುವವರು ಮತ್ತು ವಿಶ್ವದ ದೇವರ ಮುಂದೆ ತಪ್ಪಿಹೋಗಿರುವವರು ಎಂದು ಅವರು ಜನರಿಗೆ ಹೇಳಿದರು.

ತಾವು ಪಾಪದಲ್ಲಿ ಇದ್ದೇವೆಂದು ಜನರು ನಂಬಿದರು ಮತ್ತು ಆ ಪಾಪದಿಂದ ಬಿಡುಗಡೆ ಹೊಂದಲು ಮಾರ್ಗವನ್ನು ಬೇಡಿಕೊಂಡರು. ದೇವರಿಲ್ಲದೇ ಮತ್ತು ನಿರೀಕ್ಷೆ ಇಲ್ಲದೇ ಸತ್ತು ಹೋಗುವದನ್ನು ಅವರು ಬಯಸಲಿಲ್ಲ. ಪ್ರಸಂಗಿಗಳು ಏನು ಹೇಳಿದರು? ಎಂದು ಪುನಃ ಕೇಳೋಣ. "ರಕ್ಷಣೆಹೊಂದಿರಿ, ನಿಮ್ಮ ಆಯ್ಕೆಯ ಸಭೆಯನ್ನು ಸೇರಿ ಕೊಳ್ಳಿರಿ"? ಒಳ್ಳೆ ಅರ್ಥವುಳ್ಳ ಪ್ರಸಂಗಿಗಳು ಆ ರೀತಿಯಲ್ಲಿ ಇಂದು ಮಾತಾಡುವರು; ಆದರೆ ದೇವರ ಪ್ರಸಂಗಿಗಳು, ಮಾದರಿ ಪ್ರಸಂಗದಲ್ಲಿ, ಆ ರೀತಿ ಮಾತಾನಾಡಿದರೋ? "ಕೇವಲ ನಂಬಿರಿ, ಮತ್ತು ನೀವು ರಕ್ಷಿಸಲ್ಪಡುವಿರಿ" ಎಂದು ಅವರು ಹೇಳಿದರೋ? ಇಲ್ಲ! ಪೇತ್ರನು ಅವರಿಗೆ, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮನ ದಾನವನ್ನು ಹೊಂದುವಿರಿ" ಎಂದು ಹೇಳಿದನು (ವಚನಗಳು 38) ದೇವರ ಒಪ್ಪಿಗೆಯಿಂದ ಆ ದಾಖಲೆಯು ಬದಲಾಯಿಸಲ್ಪಟ್ಟಿಲ್ಲ. ಬೈಬಲಿನ ಪ್ರತಿಯೊಂದು ಹೇಳಿಕೆಯೊಂದಿಗೆ ಅದು ಪರಿಪೂರ್ಣ ಸಾಮರಸ್ಯದಲ್ಲಿದೆ. ಪ್ರತಿಯೊಬ್ಬನೂ ರಕ್ಷಿಲ್ಪಡಬೇಕಾದರೆ ನಂಬಬೇಕು ಎಂದು ನಾನು ಹೇಳಿದರೆ, ನಾನು ನೇರವಾಗಿ ದೈವಿಕ ಮಾದರಿಯನ್ನು ವಿರೋಧಿಸುತ್ತಿದ್ದೇನೆ. ಒಬ್ಬನು ನಂಬಬೇಕು; ನಂಬಿಕೆಯಿಲ್ಲದೆ ಅವನು ದೇವರನ್ನು ಮೆಚ್ಚಿಸಲಾರನು - ಆದಾಗ್ಯೂ ದೆವ್ವಗಳೂ ನಂಬುತ್ತವಲ್ಲವೇ! ಸಾವಿರಾರು ಜನರು ನಂಬುತ್ತಾರೆ ಆದರೆ ರಕ್ಷಿಸಲ್ಪಡುವದಿಲ್ಲ. ಒಬ್ಬನಿಗೆ ಮುಂದೆ ಹೋಗಿ ತನ್ನ ಪಾಪಗಳಿಗಾಗಿ ಮಾನಸಾಂತರ ಪಟ್ಟು, ಆ ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಹೊಂದುವಷ್ಟು ನಂಬಿಕೆಯಿರತಕ್ಕದ್ದು. ಬೈಬಲಿನ ಇತರ ಎಲ್ಲಾ ಹೇಳಿಕೆಗಳು ಅಪೊಸ್ತಲರ ಕೃತ್ಯಗಳು 2:38ರಲ್ಲಿಯ ಮಾತುಗಳೊಂದಿಗೆ ಹೊಂದಾಣಿಕೆಯಲ್ಲಿರುವವು, ಯಾಕಂದರೆ ಅದೇ ದೇವರ ಆತ್ಮನು ಪ್ರತಿಯೊಂದು ಹೇಳಿಕೆಯನ್ನು ಬರೆದನು.

ಇದಲ್ಲದೇ, ಒಬ್ಬ ಪಾಪಿಯು ಯೇಸುವಿನಲ್ಲಿ ನಂಬಿಕೆಯಿಟ್ಟರೆ, ತನ್ನ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ, ಮತ್ತು ಬಾಪ್ತಿಸ್ಮ ಹೊಂದಿದರೆ, ಆಗ ಆ ಪಾಪಿಯು ರಕ್ಷಿಸಲ್ಪಡುವನೆಂದು ಕ್ರೈಸ್ತನಾಗುವನೆಂದು ಹೊಸದಾಗಿ ಹುಟ್ಟುವನೆಂದು ಪ್ರತಿಯೊಬ್ಬ ಪ್ರಸಂಗಿಯು ಒಪ್ಪಿಕೊಳ್ಳುತ್ತಾನೆ. ಆ ವ್ಯವಸ್ಥೆಯ ಬಗ್ಗೆ ಯಾರೂ ಸಂಶಯ ಪಡುವದಿಲ್ಲ; ಇದು ಬೈಬಲಿನಲ್ಲಿ ಒದಗಿಸಲ್ಪಟ್ಟ ದೇವರ ಮಾದರಿಯೊಂದಿಗೆ ಪರಿಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಇಂದು ಜನರು ಬೇರೆ ಮಾರ್ಗಗಳನ್ನು ಕೊಡುತ್ತಾರೆ, ಆದರೆ ಅವರೆಲ್ಲರೂ ದೈವಿಕ ಮಾದರಿಯು ಸರಿಯಾದದ್ದು ಎಂದು ಹೇಳುತ್ತಾರೆ. ತಿಳಿಯದ ಅಳತೆಯಲ್ಲಿ ನಾನು ಮತ್ತು ನೀನು ನಮ್ಮ ಪ್ರಾಣಗಳನ್ನು ಇಡಬಹುದೋ? ನಿತ್ಯತ್ವದ ನಿಮಿತ್ತವಾಗಿ, ಪ್ರಶ್ನೆಯಿಲ್ಲದ ಅಳತೆಯನ್ನು ಉಪಯೋಗಿಸುವುದು ಹೆಚ್ಚು ಉತ್ತಮವಾಗಿದೆ.

ಹಾಗಾದರೆ, ದೇವರ ಸಭೆಯೊಳಗೆ ಪ್ರವೇಶದ ನಿಯಮ ಯಾವುದು? ಮೊದಲನೆಯದು, ಯೇಸುಕ್ರಿಸ್ತನ ಪ್ರಸಂಗಿಸುವಿಕೆ ಇತ್ತು. ಆಗ ಪ್ರಸಂಗಿಯು ಜನರಿಗೆ ಮಾನಸಾಂತರ ಪಟ್ಟು ಬಾಪ್ತಿಸ್ಮ ಹೊಂದಬೇಕೆಂದು ಹೇಳಿದನು. ಪೇತ್ರನಿಂದ ಪ್ರಸಂಗಿಸಲ್ಪಟ್ಟ ದೇವರ ವಾಕ್ಯವನ್ನು ಸ್ವೀಕರಿಸಿದವರು ಬಾಪ್ತಿಸ್ಮ ಹೊಂದಿದರು ಮತ್ತು ಆ ದಿನದಂದು ಮೂರು ಸಾವಿರ ಆತ್ಮಗಳು ಅವರಿಗೆ ಕೂಡಿಸಲ್ಪಟ್ಟವು ಎಂದು ದಾಖಲೆ

ಹೇಳುತ್ತದೆ. ನೀನು ಮತ್ತು ನಾನು ಅದೇ ಸಂಗತಿಯನ್ನು ಮಾಡಿದರೆ ಏನಾಗುತ್ತದೆ? ನಾವು ರಕ್ಷಿಸಲ್ಪಟ್ಟಿದ್ದೇವೆಂದು ತಿಳಿಯದಿದ್ದರೆ, ನಾವು ಅದನ್ನು ಎಂದಾದರೂ ಹೇಗೆ ತಿಳಿದುಕೊಳ್ಳಬಹುದು? ದೇವರ ಮಾದರಿಯನ್ನು ಅನುಸರಿಸುವುದು ಆತನ ಕೃಪೆಯ ಭರವಸೆಯನ್ನು ನಮಗೆ ಕೊಡದಿದ್ದರೆ, ನಾವು ಯಾವುದನ್ನು ಅನುಸರಿಸಬಹುದು?

ಮಾದರಿ ಸಭೆಯಲ್ಲಿ ಸದಸ್ಯತ್ವದ ನಿಯಮಗಳು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಸ್ಪಷ್ಟಪಡಿಸಲ್ಪಟ್ಟವು. ಯೇಸುವಿನ ಜೀವನ, ಮರಣ, ಪುನರುತ್ಥಾನ ಮತ್ತು ದಿವಾರೋಹಣದ ಕಥೆಯನ್ನು ಹೇಳುವದರಿಂದ ಒಂದು ಪ್ರಸಂಗವು ಪ್ರಸಂಗಿಸಲ್ಪಟ್ಟಿತು. ಈ ದೊಡ್ಡ ಹಾಗೂ ಮಹತ್ವದ ಘಟನೆಗಳು ನಂಬಲ್ಪಟ್ಟನಂತರ (ಅಪೊಸ್ತಲರ ಕೃತ್ಯಗಳು 2:36), ಪಾಪಿಗಳು ರಕ್ಷಿಲ್ಪಡದವರಾಗಿ ಉಳಿದುಕೊಂಡರು; ಅವರು ಇನ್ನೂ ಸಭೆಯಲ್ಲಿ ಇರಲಿಲ್ಲ. ಕ್ರಿಸ್ತನಲ್ಲಿ ನಂಬಿಕೆಯಷ್ಟೇ ಅಲ್ಲ, ಮಾನಸಾಂತರ ಮತ್ತು ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಮಾಡಿಸಿಕೊಳ್ಳುವುದು ಮಾದರಿ ಸಭೆಯಲ್ಲಿ ಸದಸ್ಯತ್ವದ ನಿಯಮಗಳಾಗಿ ಪರಿಶುದ್ಧಾತ್ಮನಿಂದ ಕೊಡಲ್ಪಟ್ಟವು. ನೀನು ಯಾವ ಸಭೆಯಲ್ಲಿ ಆರಾಧಿಸುತ್ತಿರುವಿರೋ ಆ ಸಭೆಯ ಮಾದರಿ ಸಭೆಯನ್ನು ಸರಿಯಾಗಿ ಅನುಸರಿಸಿದರೆ, ಆಗ ಆ ಸಭೆಯಲ್ಲಿ ಸದಸ್ಯತ್ವದ ಅದೇ ನಿಯಮಗಳಿರುವವು.

ಉದಾಹರಣೆಯಾಗಿ, ಮಾದರಿ ಸಭೆಯಲ್ಲಿ ಯಾವ ಶಿಶುಗಳೂ ಸದಸ್ಯರಾಗುವದಿಲ್ಲ, ಯಾಕಂದರೆ ಪ್ರತಿಯೊಬ್ಬ ಸದಸ್ಯನು ವಾಕ್ಯವನ್ನು "ಸ್ವೀಕರಿಸಿಕೊಂಡಿದ್ದನು" (ಅಪೊಸ್ತಲರ ಕೃತ್ಯಗಳು 2:41). ಮಾದರಿ ಸಭೆಯಲ್ಲಿ ಸದಸ್ಯತ್ವವು ಒಬ್ಬನು ಮೆಚ್ಚಿಕೆಯಿಂದ ಚುನಾಯಿಸಲ್ಪಡಬೇಕಾಗಿದ್ದಿಲ್ಲ; ಅವನು ವಾಕ್ಯವನ್ನು ಸ್ವೀಕರಿಸತಕ್ಕದೆಂದು ಮಾತ್ರವೇ ಓದುತ್ತೇವೆ.

ಇದಲ್ಲದೇ, ಮಾದರಿ ಸಭೆಯ ದಿನಗಳಲ್ಲಿ, ಒಬ್ಬನು ರಕ್ಷಿಸಲ್ಪಡುವುದು ಮತ್ತು ಒಂದು ಸಭೆಯ ಸದಸ್ಯನಾಗಿರದೇ ಇರವಂಥದ್ದು ಎಂದು ವಿಚಾರಿಸುವುದು ಇರಲಿಲ್ಲ. ಅದಕ್ಕೆ ವಿರುದ್ಧವಾಗಿ, ರಕ್ಷಿಸಲ್ಪಡುವವರೆಗೆ ಯಾವನೂ ಸಭೆಯಲ್ಲಿ ಇರುತ್ತಿರಲಿಲ್ಲ, ಮತ್ತು ಅವನು ರಕ್ಷಿಸಲ್ಪಟ್ಟ ಕೂಡಲೇ ಕರ್ತನು ಅವನನ್ನು ಸಭೆಗೆ ಸೇರಿಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 2:47).

## ವಿಶ್ವಾಸದ ಒಂದು ನಿಯಮಕ್ಕಾಗಿ ದೇವರ ಮಾದರಿ

ಮಾದರಿ ಸಭೆಯ ವಿಶ್ವಾಸದ ನಿಯಮವು, ಇಲ್ಲವೇ ವಿಶ್ವಾಸ ಸೂತ್ರವು "ಅಪೊಸ್ತಲರ ಬೋಧನೆ" ಆಗಿತ್ತು (ಅಪೊಸ್ತಲರ ಕೃತ್ಯಗಳು 2:42). ಮಾದರಿ ಸಭೆಯಲ್ಲಿಯ ಸದಸ್ಯರು ತಾವು ಮೋಶೆಯ ತತ್ವಗಳಿಂದ, ಇಲ್ಲವೇ ಸೊಲೊಮೋನನ, ಇಲ್ಲವೇ ದಾವೀದನ, ಇಲ್ಲವೇ ಸ್ನಾನಿಕನಾದ ಯೋಹಾನನ ಬೋಧನೆಯಿಂದ ಬಂಧಿಸಲ್ಪಟ್ಟಿರಲಿಲ್ಲವೆಂದು ಅರ್ಥವಾಗುತ್ತದೆ. ನಿನ್ನ ಸಭೆಯು ಜೋಸೇಫ್ ಸ್ಮಿತ್, ಮೇರಿ ಬೇಕರ ಎಡ್ಡಿ, ಎಲ್ಲೆನ್ ಜಿ. ವೈಟ್, ಜಾನ್ ವೆಸ್ಲಿ, ಮಾರ್ಟಿನ್ ಲೂಥರ್, ಅಲೆಕ್ಸಾಂಡರ್ ಕ್ಯಾಂಬೆಲ್, ಚರ್ಚ್‌ಕೌನ್ಸಿಲ್, ಪೋಪ, ಇಲ್ಲವೇ ಸಭಾ ಪಿತೃಗಳ ಬೋಧನೆಯಿಂದ ಬಂಧಿಲ್ಪಟ್ಟಿದ್ದರೆ, ಆಗ ಅದು ಮಾದರಿ ಸಭೆಗೆ ತಿಳಿಯದ ಯಾವುದರಿಂದಲೋ ಬಂಧಿಸಲ್ಪಟ್ಟಿರುತ್ತದೆ. ಮಾದರಿ ಸಭೆಯ ಸದಸ್ಯರು ಸತ್ಯದ ಆತ್ಮವನ್ನು ತಪ್ಪಿನ ಆತ್ಮದಿಂದ ತಿಳಿದುಕೊಳ್ಳಲು ಒಂದೇ ಒಂದು ವಿಧಾನ ಉಪಯೋಗಿಸುತ್ತಿದ್ದರು: "ಅಪೊಸ್ತಲರು ಅದನು ಬೋಧಿಸಿದರೋ?" (ನೋಡಿರಿ 1 ಯೋಹಾನ 4:6.)

## ಅನ್ಯೋನ್ಯತೆಗಾಗಿ ದೇವರ ಮಾದರಿ

ಮಾದರಿ ಸಭೆಯಲ್ಲಿ ಸಂಪತ್ತು ಮತ್ತು ಅನ್ಯೋನ್ಯತೆಯ ಆಳವೂ, ಯಥಾರ್ಥವಾದ ಸಹಭಾಗತ್ವವೂ ಇತ್ತು. ಅತ್ಯವಸರದ ಸಮಯಗಳಲ್ಲಿ ಸದಸ್ಯರು ತಮ್ಮ ಆಸ್ತಿಗಳನ್ನು ಮಾರಿ, ಪ್ರತಿಯೊಂದನ್ನು ಸಭೆಗೆ ಕೊಟ್ಟರು (ಅಪೊಸ್ತಲರ ಕೃತ್ಯಗಳು 2:44, 45). ಸಾಮಾನ್ಯವಾದ ಸಮಯಗಳಲ್ಲಿ, ತಮ್ಮ ಸ್ವಂತ ಕುಟುಂಬಗಳನ್ನು ನೋಡಿಕೊಳ್ಳುವದಕ್ಕಾಗಿ ಸಾಕಷ್ಟನ್ನು ತಮ್ಮಲ್ಲಿಟ್ಟುಕೊಂಡರು (1 ತಿಮೊಥೆ 5:8, 16). ಎರಡೂ ಪರಿಸ್ಥಿತಿಗಳಲ್ಲಿ, ಸಹೋದರರ ಪ್ರೀತಿಯ ಮೇಲೆ ಅವಲಂಭಿಸಿ ಯಥಾರ್ಥತೆ ಇತ್ತು (1 ಪೇತ್ರ 1:22) ಮತ್ತು ಕ್ರಿಸ್ತನಿಗಾಗಿ ಪ್ರೀತಿಯಿಂದ ಪ್ರೇರೆಪಿಸಲ್ಪಟ್ಟಿದ್ದರು (2 ಕೊರಿಂಥ 8:8).

## ಕರ್ತನ ಭೋಜನಕ್ಕಾಗಿ ದೇವರ ಮಾದರಿ

ಮಾದರಿ ಸಭೆಯಲ್ಲಿ ಸದಸ್ಯರು ವಾರದ ಮೊದಲನೆಯ ದಿನದಂದು ಒಂದಾಗಿ ಕೂಡಿ ಬರುತ್ತಿದ್ದರು, ಸಂಡೇಸ್ಕೂಲಿಗಾಗಿ ಅಲ್ಲ (ಅದು ಒಳ್ಳೆಯದಾಗಿದ್ದರೂ), ಪ್ರಸಂಗಿಯನ್ನು ಕೇಳುವದಕ್ಕಾಗಿ ಅಲ್ಲ (ಅದು ಒಳ್ಳೆಯದಾಗಿದ್ದರೂ), ಆದರೆ ಸ್ಮಾರಕ ಸಂಕೇತಗಳಲ್ಲಿ ಪಾಲುತೆಗೆದು ಕೊಳ್ಳುವದಕ್ಕಾಗಿ (ಅಪೊಸ್ತಲರ ಕೃತ್ಯಗಳು 20:7). ನೀನು ಆರಾಧನೆ ಮಾಡುತ್ತಿರುವ ಸಭೆಯಲ್ಲಿ ಪ್ರತೀ ಭಾನುವಾರ ಕರ್ತನ ಭೋಜನ ಆಚರಿಸಲ್ಪಡುವುದೋ? ಅಪೊಸ್ತಲರ ಭೋಧನೆಯನ್ನು ಅನುಸರಿಸಿದಂತೆ ಮಾದರಿ ಸಭೆಯಿಂದ ಅದು ಬದಲಾಯಿಸಿದ್ದರೆ, ಆ ಸಭೆಯಿಂದ ನೀವು ಹೊರಗೆ ಬರತಕ್ಕದ್ದು.

## ಸಭೆಯಲ್ಲಿ ಆರಾಧಿಸುವದಕ್ಕಾಗಿ ದೇವರ ಮಾದರಿ

ಆ ಮಾದರಿ ಸಭೆಯಲ್ಲಿ ಜನರು ರಕ್ಷಿಸಲ್ಪಟ್ಟನಂತರ, ಅವರು ಏನು ಮಾಡಿದರು? ಅವರು ಹೇಗೆ ಆರಾಧಿಸಿದರು? ಪ್ರಥಮ ಕ್ರೈಸ್ತರು ಹೇಗೆ ಆರಾಧಿಸಿದರು ಎಂಬುದನ್ನು ನಾವು ಕಲ್ಪಿಸಬೇಕಾಗಿಲ್ಲ, ಯಾಕಂದರೆ ಬೈಬಲು ಒಪ್ಪಿಕೊಳ್ಳಲ್ಪಟ್ಟ ಮಾದರಿಯನ್ನು ನಮ್ಮ ಮುಂದಿಡುತ್ತದೆ. ಅಪೊಸ್ತಲರ ಕೃತ್ಯಗಳು 2:42 ನಮಗೆ ಹೀಗೆ ಹೇಳುತ್ತದೆ: "ಅವರು ಅಪೊಸ್ತಲರ ಬೋಧೆನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು."

ಆತ್ಮ ಉಸುರಿದ ಪ್ರಸಂಗಿಗಳ ಬೋಧನೆಯಲ್ಲಿ ಆ ಜನರು ಮುಂದುವರಿದರು. ಅವರದು ಒಂದು ಪ್ರತ್ಯೇಕವಾದ ಸಭಾಪಂಗಡದ ಭಾವನೆಯಾಗಿರಲಿಲ್ಲ, ಕೆಲವೊಂದು ಮಾನವ ವಿಶ್ವಾಸ ಸೂತ್ರದ ಪುಸ್ತಕದ ಬರಹಗಳಾಗಿರಲಿಲ್ಲ. ಅಪೊಸ್ತಲರ ಬೋಧನೆಯು ಸತ್ಯವಾಗಿತ್ತು, ಅದು ದೇವರು ಬಯಸಿದಷ್ಟು ವಿಶಾಲವಾದದ್ದಾಗಿತ್ತು.

ಧರ್ಮದಲ್ಲಿ, ಅಪೊಸ್ತಲರ ಬೋಧನೆಯನ್ನು ಬಿಟ್ಟು ಯಾವುದೇ ಇತರ ಬೋಧನೆಯು ಸತ್ಯವಾಗಿರಲಾರದು (ನೋಡಿರಿ ಮತ್ತಾಯ 10:14, 15, 40; 15:13). ಇಂದು ಅನೇಕ ಸಭೆಗಳು ಪ್ರಚಲಿತ ಘನೆಗಳ ಬಗ್ಗೆ ಸತತವಾಗಿ ತಮ್ಮನ್ನು ಒಪ್ಪಿಸಿಕೊಳ್ಳುತ್ತಲಿವೆ; ಅವುಗಳ ಸಭಾ ಪಾಲಕರು ರಾಜಕೀಯ ಪರಿಸ್ಥಿಯ ಮೇಲೆ ಭಾಷಣಗಳನ್ನು ಕೊಡುವರು. ಪ್ರಸಿದ್ಧ ಸಭಾ ಪಂಗಡಗಳು ಅಪೊಸ್ತಲರ ಬೋಧನೆಯಲ್ಲಿ ಮುಂದುವರಿಯುವದನ್ನು ತಿರಸ್ಕರಿಸುತ್ತಿರುವದಲ್ಲದೇ, ಕ್ರೈಸ್ತರೆಂದು ಹೇಳಿಕೊಳ್ಳುವ ಅನೇಕ ಜನರು ಬೈಬಲನ್ನು ಸತತವಾಗಿ ಅಧ್ಯಯನ ಮಾಡುವದಿಲ್ಲ. ಅನೇಕರು ವಾರದ ಭಾನುವಾರದ ಸಂಡೇಸ್ಕೂಲಿನ ಪಾಠದ ಮೇಲೆ ತಮ್ಮನ್ನು ತೃಪ್ತಿಪಡಿಸಿಕೊಳ್ಳುತ್ತಿರುವರು. ಸ್ನೇಹಿತರೇ ಅಪೊಸ್ತಲರ ಬೋಧ

ನೆಯನ್ನು ಅಧ್ಯಯನ ಮಾಡುವದರಲ್ಲಿ ಮುಂದರಿಯದವನು ಧರ್ಮದಲ್ಲಿ ಸರಿಯಾಗಿ ಇರಲಾರನು; ಬೇರೆ ಯಾವ ರೀತಿಯಲ್ಲಿಯೂ ಯಾವುದು ಸರಿ ಎಂಬುದನ್ನು ಅವನು ತಿಳಿಯಲಾರನು.

ಸಭೆಯ ಪ್ರಥಮ ಸದಸ್ಯರು, ಅಪೊಸ್ತಲರ ಬೋಧನೆಯನ್ನು ಅನುಸರಿಸುವದರಲ್ಲಿ ಅನ್ಯೋನ್ಯತೆಯಲ್ಲಿ ಮುಂದುವರಿದರು - ಒಬ್ಬರೊಂದಿಗೊಬ್ಬರು ಸಹಭಾಗಿಗಳಾಗಿದ್ದರು, ಒಬ್ಬರೊಬ್ಬರ ಸದಸ್ಯರಾಗಿದ್ದರು. ಹೀಗೆ ಅನ್ಯೋನ್ಯತೆಯಲ್ಲಿ ತಮ್ಮ ಆಧಾಯಗಳನ್ನು ಉಚಿತವಾಗಿ ಕೊಟ್ಟರು ಸಭೆಯ ಯಾವುದೇ ವ್ಯವಹಾರಗಳಲ್ಲಿ ತೊಡಗದೇ, ಅವರು ಹೃದಯಪೂರ್ವಕವಾಗಿ ಕೊಟ್ಟರು.

ಅಪೊಸ್ತಲರ ಬೋಧನೆಯು ಪ್ರಥಮ ಕ್ರೈಸ್ತರನ್ನು ರೊಟ್ಟಿ ಮುರಿಯುವದಕ್ಕೆ, ಕರ್ತನ ಭೋಜನದ ಆಚರಣೆಯಲ್ಲಿ ತಮ್ಮನ್ನು ಒಪ್ಪಿಸಿಕೊಳ್ಳುವಂತೆ ನಡೆಸಿತು. ಅಪೊಸ್ತಲರ ಬೋಧನೆಯು ಅವರಲ್ಲಿ ನೆಡಲ್ಪಡದಿದ್ದರೆ, ಅವರು ಸತತವಾಗಿ ರೊಟ್ಟಿಮುರಿಯ ಬೇಕೆಂಬುದನ್ನು ತಿಳಿಯುತ್ತಿರಲಿಲ್ಲ. ಇಂದು ಅನೇಕ ಜನರು ಕ್ರಮವಿಲ್ಲದೆ, ಬಿಟ್ಟುಬಿಟ್ಟು, ರೊಟ್ಟಿ ಮುರಿಯುವದರಲ್ಲಿ ಮುಂದುವರಿಯುತ್ತಿದ್ದಾರೆ; ಆದರೆ ಬಹಳ ದಿನಗಳ ಹಿಂದೆ ಮನ್ನಣೆ ಹೊಂದಿದ ದೇವರ ಮಾದರಿಯು ಸಭೆಯು ಸತತವಾಗಿ ರೊಟ್ಟಿ ಮುರಿಯಿತು. ಇಬ್ರಿಯ 10:25, 1 ಕೊರಿಂಥ 16:2, ಮತ್ತು ಅಪೊಸ್ತಲರ ಕೃತ್ಯಗಳು 20:7ರಿಂದ, ಅಪೊಸ್ತಲರ ಬೋಧನೆಯು ಕ್ರೈಸ್ತರು ಕ್ರಮಪ್ರಕಾರವಾಗಿ ವಾರದ ಮೊದಲನೆಯ ದಿನದಂದು ರೊಟ್ಟಿ ಮುರಿಯಲು ಕೂಡಿ ಬರುತ್ತಿದ್ದರೆಂದು ನಾವು ಕಲಿಯುತ್ತೇವೆ. ಅದೇ ಬೋಧನೆಯ ಅಡಿಯಲ್ಲಿ, ಅದೇ ಬೋಧಕರಿಂದ ವ ಾರದ ಮೊದಲನೆಯ ದಿನದಂದು ರೊಟ್ಟಿ ಮುರಿಯಲು ಮತ್ತು ಪಾತ್ರೆಯಿಂದ ಕುಡಿಯಲು ಕೂಡಿಬರುತ್ತಿದ್ದದನ್ನು ಕಲಿಯುತ್ತೇವೆ. ಪ್ರತಿವಾರ ಕರ್ತನ ಭೋಜನ ಆಚರಿಸುವ ಸಭೆಯು ದೇವರಿಂದ ಮಂಜೂರಾದ ಮಟ್ಟವಾಗಿದೆ. ಇಂದು ನಾವು ನಮ್ಮ ಮಾರ್ಗದರ್ಶನಕ್ಕಾಗಿ ಕೊಡಲ್ಪಟ್ಟ ಮಾದರಿಯಿಂದ ಕಡಿಮೆಯಾಗಬಾರದು.

ದೇವರ ಮಾದರಿ ಸಭೆಯ ಆರಾಧನೆಯ ಇನ್ನೊಂದು ಸಂಗತಿಯು ಪ್ರಾರ್ಥನೆಗಳಾಗಿತ್ತು; ಅವುಗಳಲ್ಲಿ ಸಹೋದರರು ಹಾಗೆಯೇ ತಮ್ಮ ಮನವಿಗಳು ಹೆಚ್ಚು ಪರಿಣಾಮಕಾರಿಯಾಗುವವೆಂದು ನಂಬಿ ಸತತವಾಗಿ ಒಪ್ಪಿಸಿಕೊಂಡಿದ್ದರು. ಕೆಲವು ಜನ ಕ್ರೈಸ್ತರೆಂದು ಕರೆಯಲ್ಪಡುವರು ಮತ್ತು ಪ್ರಸಂಗಿಗಳು ಇಂದು ಪ್ರಾರ್ಥನೆಯಲ್ಲಿ ನಂಬಿಕೆಯಿಡುವದಿಲ್ಲ; ಅವರು ಆಧುನಿಕ ಕ್ರೈಸ್ತರು; ವಿಶ್ವದ ಓಡುವಿಕೆಯಲ್ಲಿ ಪ್ರಾರ್ಥನೆಯು ಯಾವುದನ್ನಾದರೂ ಹೇಗೆ ಬದಲಾಯಿಸುವುದೆಂಬುದನ್ನು ಅವರು ನೋಡಲಾರರು. ಪ್ರಾರ್ಥನೆಯ ಮೌಲ್ಯದ ಚರ್ಚೆಯಲ್ಲಿ ಈಗ ನಾವು ಪ್ರವೇಶಿಸುವದಿಲ್ಲ. ಹಾಗಿದ್ದರೂ ಈ ಭೂಲೋಕದ ಮೇಲಿನ ಮೊದಲನೆಯ ಸಭೆಯಲ್ಲಿ, ದೇವರಿಂದ ಪ್ರೇರಿತರಾದ ಜನರಿಂದ ಬೋಧಿಸಲ್ಪಟ್ಟ ಸಭೆಯಲ್ಲಿ ಸದಸ್ಯರು ಸತತವಾಗಿ ಪ್ರಾರ್ಥಿಸಿದರೆಂದು ನಾವು ಜ್ಞಾಪಿಸಿಕೊಳ್ಳತಕ್ಕದ್ದು. ನಮ್ಮ ಮುಂದೆ ಇಡಲ್ಪಟ್ಟ ಮಾದರಿಗಿಂತ ನಾವು ಕಡಿಮೆಯುಳ್ಳವರಾಗಿರಬಾರದು.

ಅಪೊಸ್ತಲರು ಕ್ರೈಸ್ತರಿಗೆ ಕೀರ್ತನೆಗಳನ್ನು, ಸಂಗೀತಗಳನ್ನು ಮತ್ತು ದೇವರಿಗೆ ಆತ್ಮಿಕ ಹಾಡುಗಳನ್ನು ಹಾಡಲು ಮತ್ತು ಒಬ್ಬರಿಗೊಬ್ಬರು ತಮ್ಮ ಹೃದಯಗಳಲ್ಲಿ ದೇವರಿಗೆ ಸ್ತೊತ್ರ ಹಾಡಲು ಬೋಧಿಸಲ್ಪಟ್ಟರು. ಒಂದು ಸಭೆಗೆ ಬೋಧಿಸಿದ್ದನ್ನು ಅವರು ಪ್ರತಿಯೊಂದು ಸಭೆಗೆ ಬೋಧಿಸಿದರು. ಹೀಗೆ ಅಪೊಸ್ತಲರ ಬೋಧನೆಯು ನಮ್ಮ ತುಟಿಗಳ ಫಲವಾಗಿ, ಸ್ತೊತ್ರಗಳನ್ನು ಹಾಡುವುದು ನಿಜವಾದ ಆರಾಧನೆಯ ಭಾಗವಾಗಿರುತ್ತದೆ.

## ದೇವರ ಮಾದರಿಯ ಇತರ ಗುಣಲಕ್ಷಣಗಳು

ಪ್ರಾರ್ಥನೆಯ ಮೇಲೆ ಒತ್ತಡದಿಂದ ತೋರಿಸಲ್ಪಟ್ಟಂತೆ ಮಾದರಿ ಸಭೆಯು ದೇವರ ನಡಿಸುವಿಕೆಯ ಮೇಲೆ ಅವಲಂಭಿಸಿರುತ್ತದೆ (ಅಪೊಸ್ತಲರ ಕೃತ್ಯಗಳು 2:42; 4:24; 12:12). ಮಾದರಿ ಸಭೆಯಲ್ಲಿ, ಹೃದಯದ ಏಕತೆಯು ಮತ್ತು ಬಂಧಿಸುವ ಐಕ್ಯತೆಯು ಎಲ್ಲಾ ಸದಸ್ಯರನ್ನು ಒಂದು ಸಭೆಯಾಗಿ ಮಾಡಿತು (ಅಪೊಸ್ತಲರ ಕೃತ್ಯ ಗಳು 4:32). ಒಂದೇ ಮನಸ್ಸು ಮತ್ತು ಒಂದೇ ಬಾಯಿಯಿಂದ ತಮ್ಮ ದೇವರನ್ನು ಮಹಿಮೆ ಪಡಿಸುವವರಾದರು (ರೋಮಾಪುರ 15:6). ನೀವು ಆರಾಧಿಸುತ್ತಿರುವ ಸಭೆಯು ಪಂಥಗಳಲ್ಲಿ ಒಂದು ಪಂಥವಾಗಿದ್ದರೆ, ಸಭೆಗಳಲ್ಲಿ ಒಂದು ಸಭೆಯಾಗಿದ್ದರೆ, ಸಭಾ ಪಂಗಡಗಳಲ್ಲಿ ಒಂದು ಸಭಾಪಂಗಡವಾಗಿದ್ದರೆ, "ಅದೃಶ್ಯವಾದ ಸಭೆಯು" ಒಂದು ಶಾಖೆ ಎಂದು ಕರೆಯಲ್ಪಡುವಂಥದ್ದಾಗಿದ್ದರೆ, ಆಗ ಅದು ಒಂದು ಮಾದರಿ ಸಭೆಯಾಗಿರಲಾರದು.

ಮಾದರಿ ಸಭೆಯಲ್ಲಿ, ಶಿಸ್ತುಕ್ರಮವಿತ್ತು. ಅಯೋಗ್ಯ ಸದಸ್ಯರು ಅನ್ಯೋನ್ಯತೆಯಿಂದ ಹೊರಗೆ ಹಾಕಲ್ಪಡುತ್ತಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 5:1-11; 1 ಕೊರಿಂಥ 5:13). ಮಾದರಿ ಸಭೆಗೆ ಸುವಾರ್ತಾ ಸೇವೆಯ ಆಸಕ್ತಿಯಿತ್ತು. ಪ್ರತಿಯೊಬ್ಬ ಸದಸ್ಯನು (ಅಪೊಸ್ತಲರ ಕೃತ್ಯಗಳು 8:4) - "ಪ್ರತಿಯೊಬ್ಬ ಪೂರ್ಣಾವಧಿ ಪ್ರಸಂಗಿ" ಅಲ್ಲ, - ರಕ್ಷಿಸಲ್ಪಡಲು ಸಂತೋಷವುಳ್ಳವನಾಗಿದ್ದನು ಹಾಗೆಯೇ ಇತರರೂ ಸಹ ರಕ್ಷಿಸಲ್ಪಡ ಬೇಕೆಂದು ಬಯಸುತ್ತಿದ್ದನು. ದಿನದಿನವೂ (ಅಪೊಸ್ತಲರ ಕೃತ್ಯಗಳು 5:28, 42), ಆದಿ ಕ್ರೈಸ್ತರು ಯೇಸುವಿನ ಬಗ್ಗೆ ಬೋಧಿಸುವದನ್ನು ನಿಲ್ಲಿಸಲಿಲ್ಲ. ಆದದರಿಂದ ತಮ್ಮ ಬೋಧನೆಯಿಂದ "ಯೆರೂಸಲೇಮನ್ನು ತುಂಬಿಸಿದರು." ಇದಲ್ಲದೇ, ಮಾದರಿ ಸಭೆಯಲ್ಲಿ ನಿಜವಾದ ಸಂತೋಷವಿತ್ತು. "ಏಕಮನಸ್ಸಿನಿಂದ ಮತ್ತು ಸರಳ ಹೃದಯದಿಂದ" (ಅಪೊಸ್ತಲರ ಕೃತ್ಯಗಳು 2:46), ಅವರು ದೇವರನ್ನು ಕೊಂಡಾಡಿದರು ಮತ್ತು ಸರಿಯಾಗಿ ಯೋಚಿಸುವ ಎಲ್ಲಾ ಜನರೊಂದಿಗೆ ಮೆಚ್ಚಿಕೆಯುಳ್ಳವರಾಗಿದ್ದರು.

## ಮುಕ್ತಾಯ

ಎಲ್ಲಾ ಸಭಾಪಂಗಡಗಳಿಂದ ಬಿಡಿಸಿಕೊಳ್ಳಿರಿ, ದೇವರ ಒಪ್ಪಿಗೆಯ ಮಾದರಿ ಸಭೆಗೆ ತಿರುಗಿಕೊಳ್ಳಿರಿ, ಮತ್ತು ನಿಮ್ಮನ್ನು ಅದರೊಂದಿಗೆ ಹೋಲಿಸಿಕೊಳ್ಳಿರಿ, ನಾವೆಲ್ಲರೂ ದೈವಿಕ ಮಾದರಿಯ ಕಡೆಗೆ ಹಿಂದಿರುಗಿ ಹೋದರೆ, ಧರ್ಮದಲ್ಲಿ ಎಂಥಾ ಆಶ್ಚರ್ಯಕರ ವಾದ ಐಕ್ಯತೆಯಿರುವುದು. ನಾವೆಲ್ಲರೂ ಒಂದಾಗಿರುವೆವು ಮತ್ತು ಒಂದೇ ಮನೆಯಲ್ಲಿ ಆರಾಧಿಸಲು ಮನಸ್ಸುಳ್ಳವರಾಗಿರುವೆವು ಮತ್ತು ಒಂದಾಗಿ ಕರ್ತನ ಭೋಜನದಲ್ಲಿ ಪಾಲುಗಾರರಾಗುವೆವು. ಒಂದೇ ಒಂದು ಮನ್ನಣೆ ಹೊಂದಿದ, ಮೂವತ್ತಾರು ಇಂಚುಗಳ ಉದ್ದದ, ಮಾದರಿ ಯಾರ್ಡ ಇರುವಂತೆ, ಒಂದೇ ಒಂದು ಮಾದರಿ ಸಭೆಯಿರುವುದು. ಜನರು ಒಂದು ಮಟ್ಟದ ಅಳತೆಗೋಲನ್ನು ಅನುಸರಿಸುವಾಗ, ಅವರು ಭಿನ್ನವಾದ ಅಳತೆಗಳ ಮಧ್ಯದಲ್ಲಿ ಅವರು ಆಯ್ಕೆ ಮಾಡಬೇಕಾಗಿರುವದಿಲ್ಲ; ಮತ್ತು ಅವರು ನಿರ್ದಿಷ್ಟ ಪ್ರಮಾಣದ ಸಭೆಯನ್ನು ಅನುಸರಿಸುವಾಗ, ಭಿನ್ನವಾದ ಸಭೆಗಳ ಮಧ್ಯದಲ್ಲಿ ಅವರು ಆಯ್ಕೆ ಮಾಡಬೇಕಾಗಿರುವದಿಲ್ಲ.

© 2009 Truth for Today